ರಾಜ್ಯದಲ್ಲಿ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳ ಪ್ರಾರಂಭ

2469 (2942) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ಹಿಂದೆ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳನ್ನು ಪ್ರಾರಂಭಿಸಲು ನಿಷೇದಿಸಲಾಗಿತ್ತೆ ;

ಆ) ಈ ನಿಷೇದಕ್ಕೆ ಕಾರಣಗಳೇನು ;

ಇ) ಈ ನಿಷೇದ ಆಜ್ಞೆಯನ್ನು ರದ್ದು ಗೊಳಿಸಲಾಗಿದೆಯೇ ಹಾಗಿದ್ದಲ್ಲಿ ಎಂದಿನಿಂದ ರದ್ದು ಗೊಳಿಸಲಾಗಿದೆ ;

ಈ) ಪುನ: ಈಗ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವುದೇ? ಎಂದಿನಿಂದ ಮತ್ತು ಎಲ್ಲೆಲ್ಲಿ ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗಿದೆ ; ಅನುಮತಿಗಾಗಿ ಎಷ್ಟು ಅರ್ಜಿಗಳು ಬಂದಿವೆ (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಬೇಡಿಕೆಗಿಂತ ತರಬೇತಿ ಪಡೆದ ಅಭ್ಯರ್ಥಿಗಳ ಲಭ್ಯತೆ ಅತ್ಯಧಿಕವಾಗಿದ್ದುದರಿಂದ ಹಾಗೂ ಎನ್.ಸಿ.ಟಿ.ಇ. ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ನಿಷೇಧ ವಿಧಿಸಲಾಗಿದೆ.

ಇ) ಹೊಸದಾಗಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ರಚಿಸಲಾಗುತ್ತಿದೆ. ಆದರೆ, ಬಿ.ಎಡ್. ಕಾಲೇಜುಗಳು ಸೇರಿದಂತೆ ಹೊಸ ಸಿ.ಸಿ.ಇಡಿ. ಬಿ.ಪಿ.ಇಡಿ, ಎನ್.ಟಿ.ಸಿ, ಹಿಂದಿ ಶಿಕ್ಷಾ ಸ್ನಾತಕ್ ಇತ್ಯಾದಿ ಶಿಕ್ಷಕರ ತರಬೇಚಿ ಸಂಸ್ಥೆಗಳ ಸ್ಥಾಪನೆ ಬಗ್ಗೆ ನಿಷೇಧ ಮುಂದುವರಿಸಲಾಗಿದೆ. ಈ ಕುರಿತಂತೆ ಸಾವಿರಾರು ಅರ್ಜಿಗಳು ಸ್ವೀಕೃತವಾಗಿವೆ.

ಕೊಡಗು ಜಿಲ್ಲೆಯಲ್ಲಿ ಖಾಲಿ ಇರತಕ್ಕ ವೃತ್ತಿಪರ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವುದು

2489(2428) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ವೃತ್ತಿಪರ ಶಿಕ್ಷಕರ ಹುದ್ದೆ ಖಾಲಿ ಇದೆ; ಈ ಹುದ್ದೆಯನ್ನು ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ತಾಲ್ಲೂಕುವಾರು ವಿವರ ಕೊಡುವುದು)

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) + 2 ಹಂತದ ವೃತ್ತಿ ಶಿಕ್ಷಣ ಪದವಿ ಪೂರ್ವ ಕಾಲೇಜುಗಳಲ್ಲಿ 05 ಹುದ್ದೆಗಳು ಖಾಲಿ ಇರುತ್ತಿವೆ.

1) ವಿರಾಜಪೇಟೆ ತಾಲ್ಲೂಕು 04 ಹುದ್ದೆಗಳು

2) ಮಡಕೇರಿ ತಾಲ್ಲೂಕು 01 ಹುದ್ದೆ

ಆಯಾ ಕಾಲೇಜಿನಲ್ಲಿರುವ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಬೇಕಾಗುವ ವೃತ್ತಿ ಶಿಕ್ಷಣ ಸಿಬ್ಬಂಧಿಯನ್ನು ಆಯಾ ಕಾಲೇಜಿನ ಪ್ರಾಧಿಕಾರಿಗಳೇ ಸಂಭಾವನೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶವಿದೆ.

ಕೊಡಗು ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಗಣಕ ಯಂತ್ರ ವಿತರಿಸುವುದು.

2490(3006) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಎಷ್ಟು ಮೊತ್ತದ ಗಣಕ ಯಂತ್ರ ವಿತರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಆ) ಕೊಡಗು ಜಿಲ್ಲೆಯಲ್ಲಿನ ಒಟ್ಟು 3 ತಾಲ್ಲೂಕುಗಳಲ್ಲಿನ 18 ಸರ್ಕಾರಿ ಪ್ರೌಢ ಶಾಲೆಗಳಿಗೆ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕಂಪ್ಯೂಟರ್‌ಗಳನ್ನು ವಿತರಿಸಲಾಗಿದೆ. ಶಾಲೆಗಳು ಮಕ್ಕಳ ಸಂಖ್ಯೆಗಳಿಗನುಸಾರವಾಗಿ ಎ, ಬಿ ಹಾಗೂ ಸಿ ಎಂದು ವರ್ಗೀಕರಿಸಿದ್ದು 5 ವರ್ಷದ ಈ ಯೋಜನೆಗೆ ಪ್ರತಿ ಶಾಲೆಗೆ ಕೆಳಕಂಡಂತೆ ಹಣ ವೆಚ್ಚ ಮಾಡಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿನ 18 ಶಾಲೆಗಳ ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ಕೆಟಗರಿ-ಎ ರೂ. 14.69 ಲಕ್ಷ	ಕೆಟಗರಿ-ಬಿ ರೂ. 19.10 ಲಕ್ಷ	ಕೆಟಗರಿ-ಸಿ ರೂ. 24.20 ಲಕ್ಷ	ಒಟ್ಟು	5 ವರ್ಷಗಳಿಗೆ ತಗಲುವ ಆಯವ್ಯಯ
ಮಡಕೇರಿ	2	1	1	4	ರೂ. 72.68 ಲಕ್ಷ
ಸೋಮವಾರ ಪೇಟೆ	2	1	3	6	ರೂ.121.08 ಲಕ್ಷ
ವಿರಾಜಪೇಟೆ	2	4	2	6	ರೂ.154.18 ಲಕ್ಷ
	6	6	6	18	ರೂ.347.04 ಲಕ್ಷ

ಆದ್ದರಿಂದ ಕೊಡಗು ಜಿಲ್ಲೆಯ 3 ತಾಲ್ಲೂಕಿನ 18 ಶಾಲೆಗಳಿಗೆ ಒಟ್ಟು 347.94 ರೂ.ಗಳನ್ನು ಕಂಪ್ಯೂಟರ್ ಶಿಕ್ಷಣ ನೀಡಲು ವಿನಿಯೋಗಿಸಲಾಗುವುದು.